(ಎ) ಮಂಗಳೂರು ತಾಲ್ಲೂಕನ್ನು ವಿಭಜನೆ ಮಾಡುವುದು ಮತ್ತು ಹೆಚ್ಚುವರಿ ತಹಸೀಲ್ದಾರ್‌ರವರನ್ನು ನೇಮಕ ಮಾಡುವ ಬಗ್ಗೆ-

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಅಧ್ಯಕ್ಷರೆ, ಮಂಗಳೂರು ತಾಲ್ಲೂಕು ಇಡೀ ರಾಜ್ಯದಲ್ಲಿಯೇ ಅತ್ಯಂತ ದೊಡ್ಡ ತಾಲ್ಲೂಕಾಗಿದ್ದು ಒಂದು ಮಹಾನಗರಪಾಲಿಕೆ, ಐದು ವಿಧಾನ ಸಭಾ ಕ್ಷೇತ್ರಗಳು ಮತ್ತು ನಾಲ್ಕು ನಗರ ಪಂಚಾಯತಿಯನ್ನೊಳಗೊಂಡು ೫ ಲಕ್ಷಕ್ಕೂ ಹೆಚ್ಚಿನ ಮತದಾರರುಗಳನ್ನು ಒಳಗೊಂಡಿದೆ. ಈಗಾಗಲೇ ೪೫ ಗ್ರಾಮಪಂಚಾಯತಿಗಳು ಜಿಲ್ಲಾ ವಿಭಜನೆಯಾದಾಗ ಕಾರ್ಕಳ ತಾಲ್ಲೂಕಿನ ೧೦ ಗ್ರಾಮ ಪಂಚಾಯತಿಗಳು ಇದರಲ್ಲಿ ಸೇರಿಕೊಂಡಿದೆ. ಈಗಾಗಲೇ ಕೇವಲ ಒಬ್ಬ ತಹಸೀಲ್ದಾರ್ ಮಾತ್ರವಿದ್ದು ಜಿಲ್ಲೆಯಲ್ಲಿ ಪ್ರಕೃತಿ ವಿಕೋಪ ನಿಧಿಗೆ ಸಂಬಂಧಪಟ್ಟಂತೆ ಕೆಲಸವಾಗಲಿ, ಗಲಭೆಗಳಾಗಲಿ ಅಥವಾ ಚುನಾವಣೆ ಬಂದಾಗ ಇಡೀ ವರ್ಷ ಅದರ ಕೆಲಸವೇ ಇವರಿಗಾಗುವುದರಿಂದ ಯಾವುದೇ ಗ್ರಾಮ ಸಂಪರ್ಕ ಸಭೆಗಳಲ್ಲಿ ತಾಲ್ಲೂಕು ಪಂಚಾಯತಿಗಳಿಂದ ಯಾವುದೇ ಅಧಿಕಾರಿಗಳು ಭಾಗವಹಿಸುವ ವ್ಯವಸ್ಥೆಯೇ ಅಲ್ಲಿ ಇರುವುದಿಲ್ಲ. ಆದುದರಿಂದ ನಾನು ರಾಜ್ಯ ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ ಮಂಗಳೂರು ತಾಲ್ಲೂಕನ್ನು ತಕ್ಷಣ ವಿಭಜನೆ ಮಾಡಿಕೊಡಬೇಕು. ಈ ವಿಭಜನೆಯನ್ನು ಮಾಡತುವ ತನಕ ಅಲ್ಲಿಗೆ ಹೆಚ್ಚುವರಿಯಾಗಿ ಒಬ್ಬ ತಹಸೀಲ್ದಾರ್‌ರವರನ್ನು ಮಾಡಿ ಸಾಮಾನ್ಯ ಜನರಿಗೆ ಸಿಗಬೇಕಾದ ಹಕ್ಕುಪತ್ರ ಮತ್ತು ಮನೆ ನಿವೇಶನದ ಪತ್ರ ಇವುಗಳು ಸುಗಮವಾಗಿ ಬೇಗ ಸಿಗುವಂತೆ ಮಾಡಬೇಕು.

ಅಧ್ಯಕ್ಷರು : ಶೂನ್ಯ ವೇಳೆಗೆ ಸಂಬಂಧಪಟ್ಟಂತೆ ಎಲ್ಲಾ ಸದಸ್ಯರುಗಳಿಗೂ ನಾನು ಕಿವಿ ಮಾತನ್ನು ಹೇಳಬಯಸುತ್ತೇನೆ. ಶೂನ್ಯ ವೇಳೆ ಇರುವ ಉದ್ದೇಶವೆಂದರೆ ಅಧಿವೇಶನ ನಡೆಯುವ ಸನ್ನಿವೇಶದಲ್ಲಿ ಹಿಂದಿನ ದಿವಸ ಸಭೆ ಮುಕ್ತಾಯವಾದ ಮೇಲೆ ಮತ್ತು ಮಾರನೇ ದಿವಸ ಅಧಿವೇಶನದ ಸಭೆ ಸೇರುವುದಕ್ಕೆ ಮುಂಚೆ ರಾಜ್ಯದ ಯಾವುದೇ ಕಡೆಯಲ್ಲಾಗಲೀ ಅಥವಾ ನಿಮ್ಮ ಕ್ಷೇತ್ರದಲ್ಲಾಗಲಿ ನಡೆದಿರಬಹುದಾದ ಗಂಭೀರವಾದ ಘಟನೆಗಳ್ಯಾವುವಾದರೂ ಇದ್ದರೆ ಅದರ ಬಗ್ಗೆ ಹಿಂದಿನ ದಿವಸ ಪ್ರಸ್ತಾಪ ಮಾಡುವುದಕ್ಕೆ ಆಗದೇ ಇದ್ದಾಗ ಅಥವಾ ನಿಮ್ಮ ಕ್ಷೇತ್ರದಲ್ಲಾಗಲಿ ನಡೆದಿರಬಹುದಾದ ಗಂಭೀರವಾದ ಘಟನೆಗಳ್ಯಾವುವಾದರೂ ಇದ್ದರೆ ಅದರ ಬಗ್ಗೆ ಹಿಂದಿನ ದಿವಸ ಪ್ರಸ್ತಾಪ ಮಾಡುವುದಕ್ಕೆ ಆಗದೇ ಇದ್ದಾಗ ಅಥವಾ ಮಾರನೇ ದಿವಸ ನಮ್ಮ ನಿಯಮಾವಳಿ ಪ್ರಕಾರ ಕಛೇರಿಗೆ ನೋಟಿಸ್ ಕೊಡುವುದಕ್ಕೆ ಆಗದೇ ಇದ್ದಂಥ ಸಂದರ್ಭದಲ್ಲಿ ಅಂಥ ವಿಷಯಗಳನ್ನು ಸದನದಲ್ಲಿ ಸರ್ಕಾರದ ಗಮನಕ್ಕೆ ತರುವ ಸಲುವಾಗಿ ಶೂನ್ಯ ವೇಳೆ ಅವಧಿ ಇರುವುದು. ಆದರೆ ನೀವು ಈ ವೇಳೆಯಲ್ಲಿ ನೀತಿ ಪ್ರಶ್ನೆ ಉದ್ಭವಿಸುವಂಥ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೀರಿ. ನೀವು ಕೇಳಿರುವ ತಾಲ್ಲೂಕುಗಳನ್ನು ಪುನರ್ ವಿಂಗಡಣೆ ಮಾಡತಕ್ಕಂಥ ವಿಷಯ ಪಾಲಿಸಿ ಮ್ಯಾಟರ್‌ನಲ್ಲಿ ಬರುತ್ತದೆ. ಅದನ್ನು ಈಗ ಪ್ರಸ್ತಾಪ ಮಾಡಿದರೆ ಏನು ಪ್ರಯೋಜನವಾಗುತ್ತದೆ?

ಶ್ರೀ ಕೆ. ಜಯರಾಮಶೆಟ್ಟಿ : ನಾನು ಇದರ ಬಗ್ಗೆ ಗಮನ ಸೆಳೆಯುವ ಸೂಚನೆಯಲ್ಲಿ ಕಳುಹಿಸಿದ್ದೆ. ಆದರೆ ಆ ವಿಷಯ ಬರಲಿಲ್ಲ.

ಅಧ್ಯಕ್ಷರು : ನೀವು ಕಳುಹಿಸಿರಬಹುದು. ನಾನು ಎಲ್ಲದಕ್ಕೂ ಸಮಯವನ್ನು ಅಡ್ಜೆಸ್ಟ್ ಮಾಡಬೇಕಾಗುತ್ತದೆ. ಈಗ ಮುಖ್ಯ ಮಂತ್ರಿಗಳು ಇಲ್ಲಿದ್ದಾರೆ. ಅವರೇ ಉತ್ತರ ಕೊಡುತ್ತಾರೆ.

ಶ್ರೀ ಜೆ. ಹೆಚ್. ಪಟೇಲ್ : ಈಗ ಜಿಲ್ಲೆಗಳನ್ನು ಏನು ಹೆಚ್ಚಿಸಲಾಗಿದೆ ಆ ಪ್ರಕಾರ ತಾಲ್ಲೂಕುಗಳನ್ನೂ ಕೂಡ ಹೆಚ್ಚಿಸುವ ಸಮಸ್ಯೆಗೆ ಹೋಗುವುದಿಲ್ಲ. ಆ ಸಮಸ್ಯೆಯನ್ನು ಕೆದಕುವುದಕ್ಕೆ ನಾವು ತಯಾರಿಲ್ಲ. ಈಗಾಗಲೇ ಹೊಸ ಜಿಲ್ಲೆಗಳನ್ನು ಏನು ಮಾಡಲಾಗಿದೆ ಅವುಗಳಿಗೆ ಸಾಕಷ್ಟು ಮೂಲಭೂತ ಸೌಕರ್ಯಗಳನ್ನು ಒದಗಿಸುವುದೇ ಬಹಳ ಕಷ್ಟವಾಗಿದೆ. ಜಿಲ್ಲಾ ಯುನಿಟ್ಸ್‌ಗಳು ದಕ್ಷತೆಯಿಂದ ಮೊದಲು ಆಡಳಿತವನ್ನು ನಡೆಸಲಿ. ಆ ರೀತಿಯಾದ ಮೇಲೆ ಕೆಲವು ಕಡೆ ಸೂಕ್ತವಾದ ಡಿಮ್ಯಾಂಡ್‌ಗಳು ಏನಿವೆ ಅದರ ಬಗ್ಗೆ ನೋಡಲಾಗುವುದು.

ಶ್ರೀ ಕೆ. ಜಯರಾಮಶೆಟ್ಟಿ : ಅಲ್ಲಿಯವರೆವಿಗೂ ಹೆಚ್ಚುವರಿ ತಹಸೀಲ್ದಾರ್‌ರವರನ್ನು ನೇಮಕ ಮಾಡಿ ದೈನಂದಿನ ಕೆಲಸ ಕಾರ್ಯಗಳು ಸುಗಮವಾಗಿ ನಡೆಯಲು ಅನುವು ಮಾಡಿಕೊಡಬೇಕು.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ದೈನಂದಿನ ಕಾರ್ಯಗಳಿಗೆ ಸಂಬಂಧಪಟ್ಟಂತೆ ಕರ್ತವ್ಯ ನಿರ್ವಹಿಸುವ ಸಲುವಾಗಿ ಹೆಚ್ಚುವರಿ ತಹಸೀಲ್ದಾರ್ ಬೇಕಾಗಿದ್ದರೆ ನೇಮಕ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಲಾಗುವುದು. ಹೆಚ್ಚುವರಿ ತಹಸೀಲ್ದಾರರಿಗೆ ಬೇಕಾದಂಥ ಸಿಬ್ಬಂದಿಯನ್ನು ಕೂಡ ನಾವು ನೇಮಕಾತಿ ಮಾಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :-ಮಾನ್ಯ ಪ್ರಕಾಶ್‌ರವರು ಎಲ್ಲರಿಗೂ ಕೆಲಸ ಮಾಡಿಕೊಡುತ್ತೇನೆ, ಮಾಡಿಕೊಡುತ್ತೇನೆ ಎಂದು ಹೇಳುತ್ತಾರೆ. ಅಧ್ಯಕ್ಷರಾದ ತಾವೂ ಕೂಡ ಕೆಲಸವನ್ನು ಮಾಡಿಸಿಕೊಡುತ್ತೇನೆ, ಮಾಡಿಸಿಕೊಡುತ್ತೇನೆ ಎಂದು ಹೇಳುತ್ತೀರಿ. ಆದರೆ ನಾನು ಬಹಳ ದಿವಸಗಳಿಂದ ಯಾದ್‌ಗಿರ್ ತಾಲ್ಲೂಕನ್ನು ಜಿಲ್ಲೆಯನ್ನಾಗಿ ಮಾಡಿ ಎಂದು ಕೇಳುತ್ತಲೇ ಬಂದಿದ್ದೇನೆ. ಆದರೆ ಇಲ್ಲಿಯವರೆಗೂ ಮಾಡಿಲ್ಲ. ನಾನು ಅದರ ಬಗ್ಗೆ ಕೇಳಿದಾಗಲ್ಲೆಲ್ಲಾ ಸ್ವಲ್ಪ ತಾಳಿ, ತಾಳಿ ಎಂದು ಹೇಳುತ್ತಲೇ ಇದ್ದಾರೆಯೇ ಹೊರತು ಜಿಲ್ಲೆಯನ್ನಾಗಿ ಮಾಡುವ ಬಗ್ಗೆ ಧೈರ್ಯ ತೋರಲಿಲ್ಲ.

ಅಧ್ಯಕ್ಷರು : ನೀವು ಒಪ್ಪಿಕೊಳ್ಳುವುದಾದರೆ ನಾನು ಮತ್ತು ನೀವು ಮತ್ತು ಮುಖ್ಯ ಮಂತ್ರಿಗಳು ಮೂವರೂ ಸೇರಿ ಇದರ ಬಗ್ಗೆ ಪ್ರತ್ಯೇಕವಾಗಿ ಮಾತನಾಡಿ ತೀರ್ಮಾನ ತೆಗೆದುಕೊಳ್ಳೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ಮುಖ್ಯ ಮಂತ್ರಿಗಳು ಮನಸ್ಸು ಮಾಡಿದರೆ ನಾಳೆಯೇ ಯಾದ್‌ಗಿರ್‌ನ್ನು ಜಿಲ್ಲೆಯನ್ನಾಗಿ ಮಾಡಬಹುದು. ಆದರೆ ಏಕೋ ಏನೋ ಆ ಧೈರ್ಯವನ್ನು ಅವರು ತೋರಿಸುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಯಾದ್‌ಗಿರ್‌ನ್ನು ಜಿಲ್ಲೆಯನ್ನಾಗಿ ಮಾಡಬೇಕೆಂದು ನೂರಕ್ಕೆ ನೂರು ಮುಖ್ಯ ಮಂತ್ರಿಗಳಿಗೆ ಮನಸ್ಸು ಇದೆ. ಆದರೆ ಯಾವ ಕಾರಣಕ್ಕಾಗಿ ಇನ್ನೂ ಮಾಡಿಲ್ಲವೋ ಗೊತ್ತಿಲ್ಲ.

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ವಿರೋಧ ಪಕ್ಷದ ನಾಯಕರ ಜೊತೆ ಮಾತನಾಡಿದ್ದೇನೆ. ಗುಲ್ಬರ್ಗಾ ಮತ್ತು ಬೆಳಗಾಂ, ಈ ಎರಡು ಜಿಲ್ಲೆಗಳು ಅನ್‌ವೀಲ್ಡಿ ಇದ್ದಾವೆ ಎಂಬುದು ನನಗೂ ಗೊತ್ತಿದೆ. ನಾನು ಒಂದು ಮಾತನ್ನು ಹೇಳಿದೆ. ಇರ್‌ಸ್‌ಪೇಕ್ಟಿವ್ ಆಫ್ ಪೊಲಿಟಿಕಲ್ ಪಾರ್ಟಿ ನಿಮ್ಮ ಜಿಲ್ಲೆಯ ಎಲ್ಲಾ ಶಾಸಕರು ಒಟ್ಟಾಗಿ ಬಂದು ಹೇಳಿದರೆ ನಾಳೆಯೇ ಜಿಲ್ಲೆಯನ್ನಾಗಿ ಮಾಡುತ್ತೇನೆ ಎಂದು ಹೇಳಿದೆ. ಆದರೆ ಆ ರೀತಿ ಆಗಿಲ್ಲ. ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆ ಎದುರಾಗುತ್ತದೆ. ಕೆಲವು ಕಡೆ ಚಳುವಳಿಯನ್ನು ಪ್ರಾರಂಭ ಮಾಡಿದರು. ಅದಕ್ಕೋಸ್ಕರವೇ ನಾನು ಹೇಳಿದ್ದು, ಈಗ ಆ ಕೆಲಸಕ್ಕೆ ಕೈ ಹಾಕಿ ಇರುವ ಶಾಂತಿಯನ್ನು ಕೆದಕುವುದಕ್ಕೆ ನಾನು ತಯಾರಿಲ್ಲವೆಂದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಮ್ಮ ಜಿಲ್ಲೆಯಲ್ಲಿರತಕ್ಕಂಥ ತಾಲ್ಲೂಕುಗಳ ಇನ್ನಿತರ ಶಾಸಕರುಗಳೂ ಕೂಡ ಆವರ ತಾಲ್ಲೂಕನ್ನು ಜಿಲ್ಲೆಯನ್ನಾಗಿ ಮಾಡಿ ಎಂದು ಕೇಳುತ್ತಾರೆ ಎಂದು ಮುಖ್ಯ ಮಂತ್ರಿಗಳು ಹೇಳುತ್ತಾರೆ. ಆದೇ ರೀತಿ ಉಪಾಧ್ಯಕ್ಷರು ಕೂಡ ಕೇಳುತ್ತಾರೆ ಎಂದು ಮುಖ್ಯಮಂತ್ರಿಗಳು ಹೇಳುತ್ತಾರೆ. ಆದರೆ ನಾನು ಏನು ಹೇಳುತ್ತೇನೆಂದರೆ ನೀವೇನು ನ್ಯಾಯವಾಗಿ ಏನು ಪ್ಯಾರಾಮೀಟರ್ಸ್ ಹಾಕಿದ್ದೀರಿ ಅಥವಾ ಎಲ್ಲೆಲ್ಲಿ ಸಬ್ ಡಿವಿಜನ್ ಇದೆ ಅದನ್ನು ಅಪ್‌ಗ್ರೇಡ್ ಮಾಡತಕ್ಕಂಥದ್ದರ ಬಗ್ಗೆ ಮತ್ತು ಯಾವ ಯಾವ ವರದಿಗಳ ಆಧಾರದ ಮೇಲೆ ನಿರ್ಣಯವನ್ನು ನೀವು ತೆಗೆದುಕೊಂಡಿದ್ದೀರೋ ಆ ಮೆರಿಟ್ಸ್‌ಗಳ ಮೇಲೆಯೇ ಹೋಗಿ. ನೀವು ಮೆರಿಟ್ಸ್ ಬಿಟ್ಟು ನಿರ್ಣಯ ತೆಗೆದುಕೊಳ್ಳಿ ಎಂದೇನೂ ನಾನು ಹೇಳುತ್ತಿಲ್ಲ., ಅಥವಾ ನನ್ನ ಒತ್ತಾಯದ ಮೇಲೂ ನೀವು ಮಾಡಬೇಕಾಗಿಲ್ಲ.

ಶ್ರೀ ಜೆ. ಹೆಚ್. ಪಟೇಲ್ : ಮೆರಿಟ್ ಬಗ್ಗೆ am also convinced about your argument. But I don't want to create law and order cituation.

ಶ್ರೀ ಮಲ್ಲಿಕಾರ್ಜುನ್ ಖರ್ಗೆ : ಎಲ್ಲಿ ಜನಗಳು ಸತ್ತಿಲ್ಲ ಹೇಳಿ? ಹಾವೇರಿಯಲ್ಲಿ ಸತ್ತಿಲ್ಲವೆ ?

ಶ್ರೀ ಜೆ. ಹೆಚ್. ಪಟೇಲ್ : ನಾನು ಏನು ಹೇಳಿತ್ತೇನೆಂದರೆ ತಾವು ಮತ್ತು ತಮ್ಮ ಜಿಲ್ಲೆಯ ಎಲ್ಲಾ ಶಾಸಕರು ಒಪ್ಪಿಕೊಂಡರೆ ಯಾದ್‌ಗಿರ್‌ನ್ನು ಜಿಲ್ಲೆಯನ್ನಾಗಿ ಮಾಡುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಈಗ ತಾವು ಇದುವರೆಗೆ ಮಾಡಿರತಕ್ಕಂಥ ಸೂತ್ರಗಳು ಏನು ಎಂದು ಹೇಳಿದರೆ ಯಾವ ಆಧಾರದ ಮೇಲೆ ಮಾಡಿದ್ದೀರಿ. ಅದನ್ನು ಒಪ್ಪಿಕೊಂಡಿದ್ದೇವೆ ಅದರ ಜೊತೆಗೆ ನಾನು ಏನು ಹೇಳುತ್ತೇವೆಂದರೆ ಆ ವರದಿ ಆಧಾರದ ಮೇಲೆ ಮಾಡುವುದರಿಂದ ಏನೂ ತೊಂದರೆಯಾಗಲಾರದು. ಎರಡನೆಯದು ತಾಲ್ಲೂಕುಗಳನ್ನು ಮಾಡುವುದೇ ಎಲ್ಲ ಎನ್ನುವ ಮಾತಿಗಿಂತ ಎಲ್ಲೆ ಸಮಾಧಾನಕರವಾಗಿದೆ ಯಾವುದೂ ಗಲಾಟೇ ಇಲ್ಲ ಅಂತಹ ಕಡೆ ಎಂದರೆ ತಾವು ತಾಲ್ಲೂಕು ಮಾಡಿದರೆ ಎಂದರೆ ಚಾಮರಾಜನಗರ, ಸಂತೆಮಾರನಹಳ್ಳಿ ಎರಡನ್ನು ಬೇರೆ ಬೇರೆ ಮಾಡಿ. ನಾವೆಲ್ಲಾ ತಯಾರಾಗಿದ್ದೇವೆ. ನಾಳೆ ಬೆಳಿಗ್ಗೇನೇ ನಾವೆಲ್ಲರೂ ಸ್ವಾಗತ ಮಾಡುತ್ತೇವೆ. ಚಾಮರಾಜನಗರ ಬೇರೆ, ಸಂತೇಮಾರನಹಳ್ಳಿ ಬೇರೆ ತಾಲ್ಲೂಕು ಮಾಡಿದರೆ ಒಂದು ಸ್ವಲ್ಪವೂ ಗಲಾಟೆ ಇಲ್ಲದ ರೀತಿಯಲ್ಲಿ ನಾವು ಸ್ವಾಗತ ಮಾಡುತ್ತೇವೆ. ದಯವಿಟ್ಟು ಅದನ್ನು ಮಾಡಿ.

ಅಧ್ಯಕ್ಷರು : ಮುನಿಯಪ್ಪನವರೇ, ತಾವು ತಮ್ಮ ವಿಚಾರ ಪ್ರಸ್ತಾಪ ಮಾಡಿ. ಏನು ಶಿವಕುಮಾರ್ ಬಹಳ ದಿವಸವಾಯಿತು ಕಾಣಿಸಲೇ ಇಲ್ಲ ತಾವು.

ಶ್ರೀ ಡಿ. ಕೆ. ಶಿವಕುಮಾರ್ (ಸಾತನೂರು): ಹುಂಡೇಕರ್ ಆವರ ವರದಿ ಸುಮ್ಮನೆ ಮಲಗಿದೆ. ನಮ್ಮ ಕಡೆ ಕನಕಪುರ ತಾಲ್ಲೂಕಿನಲ್ಲಿ ಎರಡು ಕ್ಷೇತ್ರ ಬರುತ್ತದೆ. ಒಂದು ಕನಕಪುರ ಇನ್ನೊಂದು ಸಾತನೂರು. ಅಲ್ಲಿ ಏಳು ಹೋಬಳಿ ಬರುತ್ತದೆ. ಅಲ್ಲಿ ಏನೂ ಕೆಲಸ ಮಾಡುವುದಕ್ಕೆ ನಮ್ಮ ಕೈಯಲ್ಲಿ ಆಗುತ್ತಿಲ್ಲ. ಒಬ್ಬರೇ ಆಫೀಸರ್ಸ್ ಇದ್ದಾರೆ. ದಯವಿಟ್ಟು ಅದರ ಬಗ್ಗೆ ಏನಾದರೂ ಒಂದು ಮಾಡಬೇಕು.

ಅಧ್ಯಕ್ಷರು : ಇಲ್ಲ ಅದಕ್ಕೆ ಸರ್ಕಾರ ಏನೂ ಹೇಳುವುದಿಲ್ಲ. ನಾನೇ ಹೇಳಿಬಿಡುತ್ತೇನೆ. ರಾಜ್ಯದ ಹಿತದೃಷ್ಟಿಯಿಂದ ನೀವು ಮತ್ತು ಕನಕಪುರ ಸ್ವಲ್ಪ ಕಾಲ ಒಟ್ಟಿಗೆ ಇರಬೇಕಾಗುತ್ತದೆ.